ಶ್ರೀ ಪಿ. ಪೆಂಕಟರಮಣ.— ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಕಾನೂನು ಪ್ರಕಾರ ಪ್ರೈವೇಟ್ ಸಂಸ್ಥೆಗಳ ಮೇಲೆ ನಾವು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರಿಗೆ ಕಳಕಳಿ ಏನು ಇದೆಯೋ ಅದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಎಸ್.ಎಸ್. ಆರಕೇರಿ.— ೧೮ ಪರ್ಸೆಂಟ್ ರಿಸರ್ವೇಷನ್ ಕಂಪಲ್‌ಸರಿಯಾಗಿ ಕೊಡಬೇಕೆಂದು ಕರ್ನಾಟಕ ಲೆಜಿಸ್ಲೇಚರ್ ಕಮಿಟಿಯವರು ರೆಕ್‌ಮೆಂಡೇಷನ್ ಮಾಡಿದ್ದಾರೆ. ಕಮಿಟಿಯವರು ರೆಕಮೆಂಡೇಷನ್ ಮಾಡಿದ್ದರೂ ಕೂಡ ಕಂಪಲ್‌ಸರಿ ೧೮ ಪರ್ಸೆಂಟ್ ರಿಸರ್ವೇಷನ್ ಮಾಡದಿದ್ದವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಪಿ. ಪೆಂಕಟರಮಣ.— ಅಧ್ಯಕ್ಷರೇ ನಾನು ಈಗಾಗಲೇ ತಿಳಿಸಿದ್ದೇನೆ ಈಗಿನ ರೂಲ್ಸ್ ಪ್ರಕಾರ ಶಿಕ್ಷೆಯನ್ನು ವಿಧಿಸುವುದಕ್ಕಾಗಲಿ, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗಲಿ ಆಗುವುದಿಲ್ಲ. ಮುಂದೆ ಈ ವಿಷಯದ ಬಗ್ಗೆ ಸರ್ಕಾರ ಪರಿಶೀಲನೆ ಮಾಡಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಗಂಗಣ್ಣ.— ಅನೇಕ ಇಲಾಖೆಗಳಲ್ಲಿ ನೇರ ನೇಮಕಾತಿ ನೀತಿ ಇರುತ್ತದೆ. ಕಾರ್ಪೊರೇಷನ್ ಬೋರ್ಡ್, ಸರ್ಕಾರಿ ಅಧೀನ ಸಂಸ್ಥೆಗಳು, ಸಹಕಾರ ಸಂಸ್ಥೆಗಳು ಇವೇ ಮುಂತಾದ ಕಡೆಗಳಲ್ಲಿ ನೇಮಕಾತಿ ಮಾಡಿಕೊಳ್ಳುವಾಗ ರಿಸರ್ವೇಷನ್ ಬಗ್ಗೆ ಪರಿಶೀಲನೆ ಮಾಡುತ್ತಿಲ್ಲ. ಆಫೀಸ್ ಅಲ್ಲದೆ ಹೊಸ ಸರ್ಕಾರ ಬಂದಮೇಲೆ ಯಾವ ನೇಮಕಾತಿಗಳನ್ನೂ ಮಾಡಿಕೊಂಡಿಲ್ಲ. ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ?.

ಶ್ರೀ ಪಿ. ಪೆಂಕಟರಮಣ.— ಸರ್ಕಾರ ತನ್ನಿಂದ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ. ಈವಾಗ ನೇಮಕಾತಿ ಮಾಡಿಕೊಳ್ಳುವಾಗ ಸ್ವಲ್ಪ ಲೋಪದೋಷಗಳು ಆಗಿರಬಹುದು. ಅದನ್ನೂ ಕೂಡ ಸರಿಪಡಿಸುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.

Amount involved for guarantee by Government in Public and Private Institutions

357 SRI H. GANGADHARAN (Krishnaraj).—Will the Minister for Finance and Tourism be pleased to state,—

(a) the names of Public and Private Institutions for which the Government stood guarantee together with the amount involved in such guarantee ;

(b) whether all these institutions paying the loan regularly to the concerned, if not, the names of such institutions in the list of defaulters and to what extent of money ;

(c) whether the Government have any control over the Private Institutions regarding the progress of loan : if so, whether Government has taken any action against such defaulting institutions ?

SRI M. VEERAPPA MOILY (Minister for Finance and Tourism).—

(a) The information as on 31-3-1981 is placed on the table of the house.*

---

* Lib No. 2 dated 8-2-1982

(b) According to the reports received from the lending institutions the following Institutions have defaulted in repayment of the loan ;

Name-Joint Stock Companies		Outstanding amount (Principle + Interest) (In lakhs of Rs.)
(1)	Vignan Industries Ltd., Tarikere	68.90 (guarantee to SBM)
(2)	The Minerva Mills Ltd., Bangalore	20+11.69 (guarantee to KSFC)
(3)	The Mysore Spinning & Manufacturing Co. Ltd., Bangalore	20+11.69 (Guarantee to KSFC)
(4)	Bangalore Dress Manufacturing Co. Ltd., Bangalore	82.67 (Central Bank of India)
(5)	Sri Mahadeswara Sahakari Sakkare Karkhane Ltd. Kollegal Private Institution	72.00×12.00 (guarantee to State Co-op. Apex Bank Ltd.)
(6)	Kannappa Automobiles Pvt. Ltd., Bangalore	5.02 (guarantee to KSFC)

(c) No. However Government have stood guarantee to only one Private Institution namely M/s Kannappa Automobiles Private Limited, Bangalore in respect of loans sanctioned by Karnataka State Financial Corporation. The Corporation will take necessary action to recovery the loan amount from the institution in case of default.

ಶ್ರೀ ಎಚ್. ಗಂಗಾಧರನ್.—ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ೧೦೦ ಕೋಟಿ ರೂಪಾಯಿಗಳಿಗಿಂತಲೂ ಅಧಿಕವಾಗಿ ಸರ್ಕಾರ ಗ್ಯಾರಂಟಿ ಕೊಟ್ಟಿದೆ. ಆದರಲ್ಲಿ ಕೆಲವೊಂದನ್ನು ಪ್ರಸ್ತಾಪ ಮಾಡುತ್ತಾ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಓಪನ್ ಮಾರ್ಕೆಟ್ ಲೋನ್ ೫೩೩೫.೨೯ ಲಕ್ಷ ರೂಗಳು, ಗ್ಯಾರಂಟಿ ಟು ಬ್ಯಾಂಕ್ ೭೭೫೫.೪೩ ಲಕ್ಷ ರೂ.ಗಳು ಗ್ಯಾರಂಟಿ ಟು ಲ್ಯಾಂಡ್ ಬ್ಯಾಂಕ್ ೧೩೮೦.೧೦ ಲಕ್ಷ ರೂಪಾಯಿಗಳು. ಹಾಗೆಯೇ ಕರ್ನಾಟಕ ಪವರ್ ಕಾರ್ಪೊರೇಷನ್ ಲಿಮಿಟೆಡ್ ೮೫೮೧ ಲಕ್ಷ ರೂ ಗಳು, ೧೦೨೫ ಲಕ್ಷ ರೂಪಾಯಿಗಳು ಹೀಗೆ ಗ್ಯಾರಂಟಿ ಕೊಟ್ಟಿದ್ದಾರೆ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಕೆಲವು ವರ್ಷಗಳು ಗ್ಯಾರಂಟಿ ಕೊಟ್ಟಿದ್ದೇವೆಂದು ಹೇಳುತ್ತೀರಿ. ಓಪನ್ ಮಾರ್ಕೆಟ್ ಲೋನ್‌ನಲ್ಲಿ ಒಂದು ಕಾಸನ್ನು ತೀರಿಸಿಲ್ಲ, ಬ್ಯಾಂಕ್‌ನಿಂದ ತೆಗೆದು ಕೊಂಡಿರುವ ಸಾಲವನ್ನು ಸ್ವಲ್ಪ ತೀರಿಸಿದ್ದಾರೆ. ಗ್ಯಾರಂಟಿ ಟು ಲ್ಯಾಂಡ್ ಬ್ಯಾಂಕ್ ಒಂದು ಕಾಸು ಕೂಡ ತೀರಿಸಿಲ್ಲ. ಪವರ್ ಕಾರ್ಪೊರೇಷನ್‌ನವರು ಕೂಡ ತೀರಿಸಿಲ್ಲ, ಇಷ್ಟು ವರ್ಷಗಳಾದರೂ ತೀರಿಸದೇ ಇರುವುದಕ್ಕೆ ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯಿಲಿ.—ಸಾಲವನ್ನು ಒಂದೇ ಕಂತಿನಲ್ಲಿ ಕೊಟ್ಟಿಲ್ಲ. ಬೇರೆ ಬೇರೆ ಕಂತುಗಳಲ್ಲಿ ತೆಗೆದುಕೊಳ್ಳಲಾಗಿದೆ. ಇದರಲ್ಲಿ ಅನೇಕ ವರ್ಷಗಳ ಗ್ಯಾರಂಟಿ ಸೇರಿದೆ. ತಾವೀಗಿಂವಾರು ತಮಗೆ ವಿಷಯಗಳು ಬೇಕಾದರೆ ಒದಗಿಸಿಕೊಡುತ್ತೇನೆ.

ಶ್ರೀ ಎಚ್. ಗಂಗಾಧರನ್.—ಅದೇ ರೀತಿ ಬೆಂಗಳೂರು ವಾಟರ್ ಸಪ್ಲೈ ಸಿವರೇಜ್ ಬೋರ್ಡ್‌ನ ೧೨೫೦ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಒಂದು ಕಾಸು ಕೂಡ ತೀರಿಸಿಲ್ಲ. ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ೧೫೨೧೫.೭೩ ಲಕ್ಷ ರೂಪಾಯಿಗಳನ್ನು ಅತ್ಯಲ್ಪ ಹಣ ತೀರಿಸಿಲ್ಲವೆಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. (೩) ಪ್ರಶ್ನೆ ಸಾಲದ ಮರುಪಾವತಿಯ

ಬಗ್ಗೆ ಖಾಸಗಿ ಸಂಸ್ಥೆಗಳ ಮೇಲೆ ಸರ್ಕಾರದವರಿಗೆ ಯಾವುದೇ ನಿಯಂತ್ರಣವಿರುವುದೆ? ಹಾಗಿದ್ದಲ್ಲಿ, ಸಾಲ ತೀರಿಸದೇ ಇದ್ದ ಸದರಿ ಸಂಸ್ಥೆಗಳ ವಿರುದ್ಧ ಸರ್ಕಾರದವರು ಕ್ರಮವನ್ನೇನಾದರೂ ತೆಗೆದುಕೊಂಡಿರುವರೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಇದಕ್ಕೊಂದು ಕಾನೂನು ಇಟ್ಟುಕೊಳ್ಳದೇ ಹೋದರೆ ಸಾಲಕ್ಕೆ ಗ್ಯಾರಂಟಿ ಕೊಡದಿದ್ದರೆ ಇದಕ್ಕೆ ಯಾರು ಜವಾಬ್ದಾರರು?

ಶ್ರೀ ಎಂ. ವೀರಪ್ಪ ಮೊಯಿಲಿ.—ಆರೆ ಸರ್ಕಾರಿ, ಬೋರ್ಡ್ ಮತ್ತು ಕಾರ್ಪೊರೇಷನ್‌ಗಳಿಗೆ ಕೊಟ್ಟಿದ್ದ ಸಾಲ ಮರು ಪಾವತಿಯಾಗಿದೆ. ಸಾಲಕ್ಕೆ ಗ್ಯಾರಂಟಿ ಕೊಟ್ಟಿದ್ದು ಮರುಪಾವತಿಯಾಗಿಲ್ಲ ಎಂದು ಹೇಳುವುದು ಸರಿಯಲ್ಲ. ವಿವರ ಬೇಕಾದರೆ ಒದಗಿಸಿ ಕೊಡುತ್ತೇನೆ. ಮರುಪಾವತಿ ಮಾಡದೆ ಒಪನ್ ಮಾರ್ಕೆಟ್ ಲೋನ್, ಬ್ಯಾಂಕ್ ಲೋನ್ ಪಡೆಯಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಕೆಲವು ಕಂಪನಿಗಳಿಗೆ ೧೯೭೩–೭೪ಕ್ಕಿಂತ ಹಿಂದೆ ಗ್ಯಾರಂಟಿ ಕೊಟ್ಟಿದ್ದಾರೆ ಅದರಲ್ಲಿ ಸಾಕಷ್ಟು ಮರುಪಾವತಿ ಆಗಿವೆ. ಪ್ರಮುಖವಾಗಿ ಕಣ್ಣಪ್ಪ ಆಟೋಮೋಬೈಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್‌ಗೆ ಗ್ಯಾರಂಟಿ ಕೊಟ್ಟಿದ್ದಾರೆ. ಆಗಸ್ಟ್ ೧೯೮೧ರಲ್ಲಿ ಮರುಪಾವತಿ ಯಾಗಿವೆ.. ಖಾಸಗಿ ಸಂಸ್ಥೆಯವರಿಗೆ ಗ್ಯಾರಂಟಿ ಕೊಡುವುದನ್ನು ನಾವು ಸಂಪೂರ್ಣವಾಗಿ ನಿಲ್ಲಿಸಿದ್ದೇವೆ. ಸರ್ಕಾರಿ, ಅರೆ ಸರ್ಕಾರಿ, ಕಾರ್ಪೊರೇಷನ್ ಬೋರ್ಡ್‌ಗಳಿಗೆ ಸಾಲ ಸಿಗುವುದಾದರೆ ಮಾತ್ರ ಗ್ಯಾರಂಟಿ ಕೊಡುತ್ತಿದ್ದೇವೆ. ಖಾಸಗಿಯವರಿಗೆ ಇತ್ತೀಚಿನ ವರ್ಷಗಳಲ್ಲಿ ಗ್ಯಾರಂಟಿ ಕೊಡುತ್ತಿಲ್ಲ. ಇನ್ನು ಮುಂದೆ ಕೂಡ ಗ್ಯಾರಂಟಿ ಕೊಡುವುದಿಲ್ಲ.

ಶ್ರೀ ಎಚ್. ಗಂಗಾಧರನ್.—ತಮ್ಮ ಪಟ್ಟಿಯ ಪ್ರಕಾರ ೧೨೦ ಕೋಟಿ ರೂಪಾಯಿಗಳಿಗೆ ಗ್ಯಾರಂಟಿ ಕೊಟ್ಟಿದ್ದೀರಿ. ಮರುಪಾವತಿಯಾದ ಹಣವೆಷ್ಟು ಅಂದರೆ ೩೦ ಕೋಟಿ ಎಂದು ಹೇಳಿದ್ದೀರಿ. ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಕೊಟ್ಟ ಹಣದಲ್ಲಿ ೩ ಕೋಟಿಯಷ್ಟು ಹಣ ಮಾತ್ರ ಮರುಪಾವತಿಯಾಗಿದೆ. ಹೀಗೆ ಹಣವನ್ನು ಮರುಪಾವತಿ ಮಾಡದಿರುವುದರಿಂದ ಬಡ್ಡಿ ಬೆಳೆಯುತ್ತದೆ. ಹೀಗೆ ಬಡ್ಡಿ ಬೆಳೆಯುವು ದರಿಂದ ಇದು ಸಾರ್ವಜನಿಕ ತಲೆಯ ಮೇಲೆ ಹೋಗುತ್ತದೆ. ಮರುಪಾವತಿ ಮಾಡದಿರುವುದಕ್ಕೆ ಶೀಘ್ರ ವಾಗಿ ಸರ್ಕಾರ ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ.—ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡಿರುವ ಕಾರ್ಪೊರೇಷನ್ ಗಳು, ಬೋರ್ಡ್‌ಗಳು ಮರುಪಾವತಿ ಮಾಡಿಲ್ಲವೆಂದು ಹೇಳುತ್ತಿದ್ದಾರೆ. ಎಷ್ಟಕ್ಕೆ ಗ್ಯಾರಂಟಿ ಕೊಡುತ್ತೀರಿ ಎನ್ನುವ ಬಗ್ಗೆ ಕೂಡ ಪ್ರಶ್ನೆ ಮಾಡಿದ್ದಾರೆ ಅವರಿಗೆ ಎಷ್ಟು ಮ್ಯಾಕ್ಸಿಮಮ್ ಬೇಕೋ ಅಷ್ಟನ್ನು ತೆಗೆದು ಕೊಳ್ಳಬಹುದು. ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡುತ್ತಾರೆ. ಸಾಲವನ್ನು ಮರು ಪಾವತಿಯೇ ಮಾಡಿಲ್ಲವೆಂದು ವಾದ ಮಾಡುವುದು ಸರಿಯಲ್ಲ. ಮರು ಪಾವತಿ ಮಾಡುತ್ತಾರೆ. ಪುನ: ಸಾಲ ತೆಗೆದುಕೊಳ್ಳುತ್ತಾರೆ.

ಶ್ರೀ ಎಚ್. ಗಂಗಾಧರನ್.—ವಾಣಿವಿಲಾಸ್ ಕೋ–ಆಪರೇಟಿವ್ ಸ್ಪಿನ್ನಿಂಗ್ ಫ್ಯಾಕ್ಟರಿ ಹಿರಿಯೂರು ಸುಮಾರು ೧೨೦ ಲಕ್ಷ ರೂಪಾಯಿಗಳ ಸಾಲ ತೆಗೆದುಕೊಂಡು, ೩೪೧ ಲಕ್ಷ ರೂಪಾಯಿಗಳ ಡ್ಯೂ ಇದೆ ಎಂದು ಹೇಳಿದ್ದೀರಿ, ಇದೇನು ಮುಂದ್ರಣದ ತಪ್ಪೋ ಅಥವಾ ಅಷ್ಟು ಬಾಕಿ ಇದೆಯೋ ದಯವಿಟ್ಟು ತಿಳಿಸಿ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರ ಶಕ್ತಿ ಮೇಲೆ ಸೆಕ್ಯೂರಿಟಿ ಮೇಲೆ ತೆಗೆದುಕೊಂಡಿರ ಬಹುದು. Extend of the borrowing is covered by guarantee. For over and above the guaranteed amount, they must give some other guarantee.

ಶ್ರೀ ಬಿ. ವಿ. ಕಕ್ಕಿಲಾಯ.—ಮಂತ್ರಿಗಳ ಉತ್ತರದಲ್ಲಿ ಕಣ್ಣಪ್ಪ ಆಟೋಮೋಬೈಲ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇವರಿಗೆ ೫ ಲಕ್ಷ ರೂಪಾಯಿಗಳಿಗೆ ಖಾತರಿ ಕೊಟ್ಟಿದ್ದೀರಿ ಅವರ ಹಣದಲ್ಲಿ ಎಷ್ಟು ಪಡೆದುಕೊಂಡಿದ್ದೀರಿ? ಎಷ್ಟು ವಾಪಸ್ಸು ಕೊಟ್ಟಿದ್ದಾರೆ? ಕೊಡದಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಆಗಸ್ಟ್ ೧೯೮೧ರಲ್ಲಿ ಎಲ್ಲಾ ಹಣವನ್ನು ವಾಪಸ್ಸು ಕಟ್ಟಿದ್ದಾರೆ. ಸರ್ಕಾರದ ಜಾಮೀನು ಮುಗಿದಿದೆ. The Government guarantee does not subsist.